**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 851 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 20.03.2025 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಪಬ್‌ಗಳನ್ನು ತೆರೆಯಲು ಇರುವ ಮಾನದಂಡಗಳೇನು; ಬೆಂಗಳೂರು ನಗರದಲ್ಲಿ ಪರವಾನಗಿ ಪಡೆದು ನಡೆಯುತ್ತಿರುವ ಪಬ್‌ಗಳ ಸಂಖ್ಯೆಯೆಷ್ಟು; ಅನಧಿಕೃತವಾಗಿ ಪಬ್‌ಗಳನ್ನು ನಡೆಸುತ್ತಿರುವವರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; (ಪಬ್‌ಗಳ ಸಮೇತ ಸಂಪೂರ್ಣ ಮಾಹಿತಿ ನೀಡುವುದು) | 1992 ನೇ ಸಾಲಿನಿಂದ ಸಿಎಲ್–2, ಸಿಎಲ್–9 ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲು ನಿರ್ಬಂದಿಸಲಾಗಿರುತ್ತದೆ. ಕರ್ನಾಟಕ ಅಬಕಾರಿ (ಲೀಸ್ ಆಫ್ ದಿ ರೈಟ್ ಆಫ್ ರಿಟೇಲ್ ವೆಂಡ್ ಆಫ್ ಬಿಯರ್) ನಿಯಮಗಳು, 1976 ರ ನಿಯಮ 5(1) ಮತ್ತು (2) ರಂತೆ ನೀಡಿರುವ ಬಲ್ಕ್ ಬಿಯರ್ ಮತ್ತು ಬಾಟಲ್ಡ್ ಬಿಯರ್ ಸನ್ನದುಗಳನ್ನು ಮಾತ್ರ ನವೀಕರಿಸಲಾಗುತ್ತಿದೆ.<br>ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–9, ಸಿಎಲ್–17 ಮತ್ತು ಸಿಎಲ್–18 ಸನ್ನದುಗಳಿಗೆ ಹೊಂದಿಕೊಂಡಂತೆ ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಲೀಸ್ ಆಫ್ ದಿ ರೈಟ್ ರಿಟೇಲ್ ವೆಂಡ್ ಆಫ್ ಬಿಯರ್) ನಿಯಮ 1976 ರ ನಿಯಮಗಳಲ್ಲಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರಲ್ಲಿನ ನಿಯಮ 5 ರಡಿ ನಿರಾಕ್ಷೇಪಣಾ ಸ್ಥಳವಾಗಿರುವುದನ್ನು ಖಚಿತಪಡಿಸಿಕೊಂಡು ಆರ್.ವಿ.ಬಿ(ಪಬ್) ಸನ್ನದುಗಳನ್ನು ಮಾತ್ರ ಮಂಜೂರು ಮಾಡಲಾಗುತ್ತಿದೆ.<br>ಬೆಂಗಳೂರು ನಗರದಲ್ಲಿ ದಿನಾಂಕ:11–03–2025 ರ ಅಂತ್ಯಕ್ಕೆ ಸ್ವತಂತ್ರ ಆರ್.ವಿ.ಬಿ ಸನ್ನದುಗಳು 57 ಮತ್ತು ಹೊಂದಿಕೊಂಡಂತೆ ಆರ್.ವಿ.ಬಿ ಸನ್ನದುಗಳು 699 ಒಟ್ಟಾರೆ 756 ಆರ್.ವಿ.ಬಿ ಸನ್ನದುಗಳು(ಪಬ್‌ಗಳು) ಕಾರ್ಯನಿರ್ವಹಿಸುತ್ತಿವೆ. ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಅನಧಿಕೃತವಾಗಿ ಪಬ್‌ಗಳ ನಡೆಸುತ್ತಿದ್ದರೂ ಕೂಡ ಪೊಲೀಸ್ ಇಲಾಖೆಯಿಂದ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರಲು ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| | | ಪಬ್ ಸನ್ನದು ಪಡೆಯದೆ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ.<br>ಒಂದು ವೇಳೆ ಪರವಾನಗಿ ಪಡೆಯದೇ ಪಬ್‌ಗಳು ಕಾರ್ಯನಿರ್ವಹಿಸಿದ್ದಲ್ಲಿ, ಅಂತಹ ಅನಧಿಕೃತ ಪಬ್‌ಗಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 15 **(Sale of Excisable Articles without licence prohibited)** ರಂತೆ ಪ್ರಕರಣವನ್ನು ದಾಖಲಿಸಿ ಆರೋಪಿಯನ್ನು ದಸ್ತಗಿರಿಗೊಳಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗುತ್ತದೆ. |
| ಇ) | ಪಬ್‌ಗಳನ್ನು ತೆರೆಯಲು ಮತ್ತು ಮುಚ್ಚಲು ಸರ್ಕಾರದಿಂದ ಸಮಯ ನಿಗಧಿಪಡಿಸಿದೆಯೇ; ಇಲ್ಲದಿದ್ದಲ್ಲಿ, ಅವಧಿ ಮೀರಿ ನಡೆಸುತ್ತಿರುವವರ ವಿರುದ್ದ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ. | ಪಬ್‌ಗಳಿಗೆ ವ್ಯಾಪಾರ ವಹಿವಾಟಿನ ಸಮಯವನ್ನು ಬೆಳಿಗ್ಗೆ 10.00 ರಿಂದ ರಾತ್ರಿ 11.30 ರವರೆಗೆ ನಿಗಧಿಪಡಿಸಲಾಗಿರುತ್ತದೆ.<br>ಅವಧಿ ಮೀರಿ ಕಾರ್ಯನಿರ್ವಹಿಸಿದ ಪಬ್‌ಗಳ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 11 ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. |
| ಈ) | ಅವಧಿ ಮೀರಿ ಪಬ್‌ಗಳನ್ನು ನಡೆಸುತ್ತಿರುವುದರಿಂದ ನಗರದಲ್ಲಿ ಕಾನೂನು ಸುವ್ಯವಸ್ಥೆ ಹದೆಗೆಡುತ್ತಿರುವುದಾಗಿ ಗೃಹ ಇಲಾಖೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ತಿಳಿಸಿದ್ದು, ಈ ಎರಡೂ ಇಲಾಖೆಗಳು ಸೇರಿ ಅವಧಿ ಮೀರಿ ನಡೆಸುತ್ತಿರುವ ಪಬ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಮುಂದಾಗುವುದೇ? (ಸಂಪೂರ್ಣವಾದ ಮಾಹಿತಿ ನೀಡುವುದು) | ಬೆಂಗಳೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಸಮರ್ಪಕವಾಗಿದೆ. ಮುಂದುವರೆದು, ನಿಯಮ ಉಲ್ಲಂಘಿಸಿ ಕಾರ್ಯನಿರ್ವಹಿಸುವ ಪಬ್‌ಗಳ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ. |

**ಆಇ 35 ಇಎಲ್‌ಕ್ಯೂ 2025**

(ಆರ್.ಬಿ. ತಿಮ್ಮಾಪುರ)
ಅಬಕಾರಿ ಸಚಿವರು

## ಅನುಬಂಧ

| ಬೆಂಗಳೂರು ನಗರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಬ್‌ಗಳ ವಿವರ | | | | |
|---|---|---|---|---|
| ಕ್ರ. ಸಂ | ಜಿಲ್ಲೆ | ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವತಂತ್ರ ಆರ್.ವಿ.ಬಿ(ಪಬ್) ಸಂಖ್ಯೆ | ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಂದಿಕೊಂಡಂತೆ ಆರ್.ವಿ.ಬಿ(ಪಬ್)ಸಂಖ್ಯೆ | ಒಟ್ಟು |
| 1 | ಬೆಂಗಳೂರು ನಗರ ಜಿಲ್ಲೆ-01 | 4 | 86 | **90** |
| 2 | ಬೆಂಗಳೂರು ನಗರ ಜಿಲ್ಲೆ-02 | 5 | 73 | **78** |
| 3 | ಬೆಂಗಳೂರು ನಗರ ಜಿಲ್ಲೆ-03 | 2 | 35 | **37** |
| 4 | ಬೆಂಗಳೂರು ನಗರ ಜಿಲ್ಲೆ-04 | 14 | 75 | **89** |
| 5 | ಬೆಂಗಳೂರು ನಗರ ಜಿಲ್ಲೆ-05 | 15 | 120 | **135** |
| 6 | ಬೆಂಗಳೂರು ನಗರ ಜಿಲ್ಲೆ-06 | 4 | 85 | **89** |
| 7 | ಬೆಂಗಳೂರು ನಗರ ಜಿಲ್ಲೆ-07 | 12 | 133 | **145** |
| 8 | ಬೆಂಗಳೂರು ನಗರ ಜಿಲ್ಲೆ-08 | 1 | 92 | **93** |
| ಒಟ್ಟು | | **57** | **699** | **756** |

**ಆಇ 35 ಇಎಲ್‌ಕ್ಯೂ 2025**